# ಕರ್ನಾಟಕ ವಿಧಾನ ಪರಿಷತ್ತು

| | |
|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : | 933 |
| ಸದಸ್ಯರ ಹೆಸರು: | ಶ್ರೀಮತಿ ಹೇಮಲತಾ ನಾಯಕ್ ( ವಿಧಾನ ಸಭೆಯಿಂದ ಚುನಾಯಿತರಾದರು) |
| ಉತ್ತರಿಸ ಬೇಕಾದ ದಿನಾಂಕ : | 23.02.2024 |
| ಉತ್ತರಿಸುವವರು: | ಮಾನ್ಯ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ, ವಿಕಲಚೇತನರ ಮತ್ತು ಹಿರಿಯ ನಾಗರಿಕರ ಸಬಲೀಕರಣ ಸಚಿವರು. |

<table>
<tr><th>ಕ್ರ.ಸಂ.</th><th>ಪ್ರಶ್ನೆ</th><th>ಉತ್ತರ</th></tr>
<tr><td>ಅ</td><td>ವಿಶೇಷ ಚೇತನರ/ದಿವ್ಯಾಂಗರಿಗೆ ನೀಡುತ್ತಿರುವ ಮಾಸಿಕ ವೇತನ ಎಷ್ಟು; (ಫಲಾನುಭವಿಗಳ ಸಂಖ್ಯೆಯೊಂದಿಗೆ ಜಿಲ್ಲಾವಾರು ವಿವರ ನೀಡುವುದು)</td><td>ಸಾಮಾಜಿಕ ಭದ್ರತೆ ಮತ್ತು ಪಿಂಚಣಿ ನಿರ್ದೇಶನಾಲಯದಡಿ ವಿಶೇಷ ಚೇತನರ/ ದಿವ್ಯಾಂಗರಿಗೆ ಈ ಕೆಳಕಂಡಂತೆ ಮಾಸಿಕ ಪಿಂಚಣಿ ನೀಡಲಾಗುತ್ತಿದೆ.
<table>
<tr><td>ಅಂಗವೈಕಲ್ಯತೆಯು ಪ್ರಮಾಣ</td><td>ಮಾಸಿಕ ಪಿಂಚಣಿ ಮೊತ್ತ</td></tr>
<tr><td>ಶೇ.40 ರಿಂದ ಶೇ.74ರಷ್ಟು ಅಂಗವೈಕಲ್ಯತೆ ಹೊಂದಿದವರಿಗೆ</td><td>ರೂ.800/-</td></tr>
<tr><td>ಶೇ.75ಕ್ಕಿಂತ ಹೆಚ್ಚಿನ ಅಂಗವೈಕಲ್ಯತೆ ಹೊಂದಿದವರಿಗೆ</td><td>ರೂ.1400/-</td></tr>
<tr><td>ಶೇ.75ಕ್ಕಿಂತ ಹೆಚ್ಚಿನ ಮನೋವೈಕಲ್ಯತೆ ಹೊಂದಿದವರಿಗೆ</td><td>ರೂ.2000/-</td></tr>
</table>
(ಜಿಲ್ಲಾ ಫಲಾನುಭವಿಗಳ ವಿವರವನ್ನು ಅನುಬಂಧದಲ್ಲಿ ಒದಗಿಸಲಾಗಿದೆ).</td></tr>
<tr><td>ಆ</td><td>ವಿಶೇಷ ಚೇತನರ/ದಿವ್ಯಾಂಗರ ಹೆಣ್ಣು ಮಕ್ಕಳ ಮದುವೆಗೆ ಪ್ರೋತ್ಸಾಹ ಧನ ರೂಪದಲ್ಲಿ ಪ್ರೋತ್ಸಾಹ ಧನ ನೀಡಲಾಗುತ್ತಿದೆಯೇ; ಇಲ್ಲವಾದಲ್ಲಿ ಕನಿಷ್ಠ/1 ಲಕ್ಷ ರೂ ಪ್ರೋತ್ಸಾಹ ಧನ ರೂಪದಲ್ಲಿ ನೀಡುವ ಬಗ್ಗೆ ಸರ್ಕಾರ ಕ್ರಮ ಕೈಗೊಳ್ಳಲಾಗುವುದೇ; (ವಿವರ ನೀಡುವುದು)</td><td>ವಿವಾಹ ಪ್ರೋತ್ಸಾಹ ಧನ ಯೋಜನೆಯಡಿ ರೂ.50,000/-ಗಳ ಪ್ರೋತ್ಸಾಹ ಧನವನ್ನು ನೀಡಲಾಗುತ್ತಿದ್ದು, ಪ್ರೋತ್ಸಾಹ ಧನ ಹೆಚ್ಚಿಸುವ ಪ್ರಸ್ತಾವನೆ ಸರ್ಕಾರದ ಪರಿಶೀಲನೆಯಲ್ಲಿದೆ.</td></tr>
<tr><td>ಇ</td><td>ಎಲ್ಲಾ ದಿವ್ಯಾಂಗರ ಉಚಿತ ಬಸ್‌ಪಾಸ್ ನೀಡಲಾಗುತ್ತಿದೆಯೇ; ಇಲ್ಲವಾದಲ್ಲಿ ಉಚಿತ ಬಸ್ ಪಾಸ್ ನೀಡಲು ತಕ್ಷಣ ಕ್ರಮ ಕೈಗೊಳ್ಳಲಾಗುವುದೇ;</td><td>ಈಗಾಗಲೇ ಶಕ್ತಿ ಯೋಜನೆಯಡಿ ವಿಕಲಚೇತನ ಮಹಿಳೆಯರಿಗೆ ಫ್ರೀ ಬಸ್ ಪ್ರಯಾಣ ಸೌಲಭ್ಯ ಕಲ್ಪಿಸಲಾಗಿದೆ ಹಾಗೂ ಅಂಧ ಪುರುಷರಿಗೆ ರಾಜ್ಯಾದ್ಯಂತ ಉಚಿತವಾಗಿ ಪ್ರಯಾಣ ಸೌಲಭ್ಯ ಕಲ್ಪಿಸಲಾಗಿದೆ.<br><br>ಪುರುಷ ಅಂಗವಿಕಲರಿಗೆ ಉಚಿತ ಪ್ರಯಾಣ ಸೌಲಭ್ಯವನ್ನು ಒದಗಿಸುವ ಪ್ರಸ್ತಾವನೆಯು ಸಾರಿಗೆ ಇಲಾಖೆಯ ಪರಿಗಣನೆಯಲ್ಲಿರುವುದಿಲ್ಲ.</td></tr>
<tr><td>ಈ</td><td>ಅಂಗವಿಕಲರ ನಿರ್ದೇಶನಾಲಯವನ್ನು ಆಯುಕ್ತಾಲಯವನ್ನಾಗಿ ಮಾಡುವ ಮೂಲಕ ಪೂರ್ಣ ಕಾಲಿಕ ಸರ್ಕಾರಿ ಸಿಬ್ಬಂದಿ ನೇಮಕ ಮಾಡಿಕೊಂಡು ವಿಶೇಷ ಚೇತನರ/ದಿವ್ಯಾಂಗರ ಎಲ್ಲಾ ಸಮಸ್ಯೆ ಬಗೆಹರಿಸಲು ಏಕಗವಾಕ್ಷಿ ಯೋಜನೆಯನ್ನು ಜಾರಿಗೆ ತರುವ ಮೂಲಕ ಸರ್ಕಾರ ಕೈಗೊಳ್ಳುವ ಕ್ರಮಗಳೇನು?</td><td>ಅಂಗವಿಕಲರ ನಿರ್ದೇಶನಾಲಯವನ್ನು ಆಯುಕ್ತಾಲಯವನ್ನಾಗಿ ಮಾಡುವ ಪ್ರಸ್ತಾವನೆ ಇರುವುದಿಲ್ಲ.</td></tr>
</table>

**ಸಂಖ್ಯೆ: ಮಮಇ 39 ಪಿಹೆಚ್‌ಪಿ 2024**

(ಲಕ್ಷ್ಮೀ ಆರ್. ಹೆಬ್ಬಾಳಕರ್)
ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಹಾಗೂ
ವಿಕಲಚೇತನರ ಮತ್ತು ಹಿರಿಯ ನಾಗರಿಕರ
ಸಬಲೀಕರಣ ಇಲಾಖೆ ಸಚಿವರು.